ಗ್ರಾಮಾಂತರ ಪ್ರದೇಶದಲ್ಲಿರುವ ವೈದ್ಯಾಧಿಕಾರಿಗಳಿಗೆ ವಸತಿ ಸೌಲಭ್ಯಗಳು,

೭೫೭. ಶ್ರೀ ಪಿ.ಬಿ ಓಂಕಾರ ಮೂರ್ತಿ.— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

೧) ಗ್ರಾಮಾಂತರ ಪ್ರದೇಶದಲ್ಲಿ ವಸತಿ ಸೌಕರ್ಯದ ಅಭಾವವಿರುವುದರಿಂದ ವೈದ್ಯಾಧಿಕಾರಿಗಳು ಗ್ರಾಮಾಂತರ ಪ್ರದೇಶಕ್ಕೆ ಹೋಗಲು ನಿರಾಕರಿಸುತ್ತಿರುವುದು ನಿಜವೇ ?

೨) ಹಾಗಿಲ್ಲದಿದ್ದಲ್ಲಿ ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳ ಕೆಲಸ ಮಾಡುವ ವೈದ್ಯಾಧಿಕಾರಿಗಳಿಗೆ ವಸತಿ ಸೌಕರ್ಯಗಳನ್ನು ಹೆಂಡ್ಕೊ ಯೋಜನೆಯಲ್ಲಿ ಒದಗಿಸಿಕೊಡುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ?

೩) ಹಾಗಿದ್ದಲ್ಲಿ ೧೯೮೬-೮೮ ರಲ್ಲಿ ವಸತಿ ಸೌಕರ್ಯವನ್ನು ಒದಗಿಸಿ ಕೊಡಲಾಗುವುದೆ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿ ಮತ್ತು ಅಬ್ಕಾರಿ ಸಚಿವರು).—

೧) ಅನೇಕ ಕಾರಣಗಳಲ್ಲಿ ಇದೂ ಒಂದಾಗಿದೆ.

೨) ಇದೆ.

೩) ೧೯೮೭-೮೮ರಿಂದ ಹಂತಹಂತವಾಗಿ ವಸತಿ ಸೌಕರ್ಯವನ್ನು ಒದಗಿಸುವ ವಿಚಾರವು ಸರ್ಕಾರಕ್ಕೆ ಇದೆ.

ಶ್ರೀ ಪಿ.ಬಿ. ಓಂಕಾರಮೂರ್ತಿ.—ನಮ್ಮ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಬಹಳಷ್ಟು ಆಸ್ಪತ್ರೆಗಳಲ್ಲಿ ವಸತಿಸೌಕರ್ಯ ಇರುವುದಿಲ್ಲ ಇವುಗಳಿಗೆ ಪ್ರಾಶಸ್ತ್ಯ ಕೊಟ್ಟು ವಸತಿ ಒದಗಿಸಿ ಕೊಡಂತ್ತಿರಾ ?

ಶ್ರೀ ಹೆಚ್.ಟಿ.ಕೃಷ್ಣಪ್ಪ.—ಸ್ವಾಮಿ ರಾಜ್ಯಾದ್ಯಂತ ಈ ಸಮಸ್ಯೆ ಇದೆ. ಬರೀ ಕಡೂರು ತಾಲ್ಲೂಕಿಗೆ ಇದಂ ಸೀಮಿತವಾದದ್ದಲ್ಲಿ. ಈಗ ಹುಡ್ಕೋ ನೆರವಿನ ಮೂಲಕ ಎಲ್ಲಾ ಭಾಗಗಳಿಗೂ ಕೂಡ ವಸತಿ ಸೌಕರ್ಯ ಒದಗಿಸುವ ಯೋಜನೆಯನ್ನು ಹಂತಹಂತವಾಗಿ ಕೈಗೆತ್ತಿಕೊಳ್ಳಲಾಗುವುದು, ಆ ಸಂದರ್ಭದಲ್ಲಿ ನಿಮ್ಮ ಕಡೂರಿಗೂ ಆ ಸೌಲಭ್ಯ ದೊರೆಯಬುತ್ತದೆ.

ಅಧ್ಯಕ್ಷರು.—ಶ್ರೀ ಡಿ.ಜಿ. ಬಸವನಗೌಡ ಅವರ ಶಂಗಿನೇ ಪ್ರಶ್ನೆ, ಮಾನ್ಯ ಸದಸ್ಯರು ಗೈರು ಹಾಜರಿ.

ಚಿತ್ರಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸುವುದು

೭೫೭. ಶ್ರೀ ವಿಶ್ವನಾಥ್ ಪಾಟೀಲ ಹೆಬ್ಬಾಳ (ಚಿತ್ರಾಪುರ).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರಾಪುರ ತಾಲ್ಲೂಕಿನಲ್ಲಿ ಎಷ್ಟು ಆರೋಗ್ಯ ಘಟಕಗಳಿವೆ ? ಅವುಗಳಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯಘಟಕಗಳು ತನ್ನದೇ ಆದ ಕಟ್ಟಡ ಹೊಂದಿವೆ?

ಆ) ಚಿತ್ರಾಪುರ ತಾಲ್ಲೂಕಿನ ದಂಡೂತಿ, ವೇಟ ಶ್ರೀರೂರು, ಗುಂಡಗುರ್ತಿ ಹಾಗೂ ಗುಲ್ಬರ್ಗ ತಾಲ್ಲೂಕಿನ ಹರಸೂರು ಗ್ರಾಮ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಗ್ರಾಮಸ್ಥರು ೨.೫೦೦ ರೂ ಹಾಗೂ ೪ ಎಕರೆ ಭೂಮಿಯನ್ನು ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಪ್ರಾಥಮಿಕ ಆರೋಗ್ಯ ಘಟಕಗಳ ಕಟ್ಟಡವನ್ನು ಕಟ್ಟಲು ಈ ವರ್ಷ ಪ್ರಾರಂಭಿಸಲಾಗುವುದೆ?

ಈ) ಗ್ರಾಮಸ್ಥರು ಜಾಗ ಹಾಗೂ ಭೂಮಿಯನ್ನು ಕೊಟ್ಟ ಮೇಲೆ ಎಷ್ಟು ದಿನಗಳಲ್ಲಿ ಕಟ್ಟಡದ ಕೆಲಸ ಪ್ರಾರಂಭಿಸಬೇಕು ಎನ್ನುವುದರ ಬಗೆಗೆ ಕಾರ್ಯನೀತಿ ಇದೆಯೇ?

ಉ) ಚಿತ್ರಾಪುರ ಆಸ್ಪತೆಯ ಮಹಿಳಾ ವೈದ್ಯಾಧಿಕಾರಿಗಳ ಸ್ಥಳ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಎಷ್ಟು ದಿವಸಗಳಿಂದ ಖಾಲಿ ಇದೆ? ಇದನ್ನು ಯಾವಾಗ ತುಂಬಲಾಗುವುದು?